**ಸಾಕ್ಷಿಯನ್ನು ದಿಃ 20.12.2025 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ 1 ನೇ ಎದುರುದಾರರ ಪರ ವಕೀಲರಿಂದಃ**

ಈ ದಿನ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವ ಎಲ್ಲಾ ವಿಷಯಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ಅದಕ್ಕೆ ನನ್ನ ಸಹಿ ಇರುತ್ತದೆ.

ಸಂಸ್ಥೆಯವರು ನೀಡಿರುವ ಅಧಿಕಾರ ಪತ್ರವನ್ನು ಹಾಜರುಪಡಿಸಿದ್ದು, ನಿಆರ್. 1 ಎಂದು,
ಆರ್.ಸಿ. ಕಾರ್ಡ್ ನ ನೋಟರಿಕೃತ ದಾಖಲೆ ಹಾಜರು ಪಡಿಸಿದ್ದು ನಿಆರ್.2 ಎಂದು,
ಡಿ.ಎಲ್ ನ ನೋಟರಿಕೃತ ದಾಖಲೆ ಹಾಜರು ಪಡಿಸಿದ್ದು ಅದನ್ನು ನಿಆರ್. 3 ಎಂದು,
ಬಿ ಎಕ್ಸಟ್ರಾಕ್ಟ್ ನ ನೋಟರಿಕೃತ ದಾಖಲೆ ಹಾಜರು ಪಡಿಸಿದ್ದು ನಿಆರ್. 4 ಎಂದು,
ಎರಡು ವಿಮಾ ಪಾಲಿಸಿಯ ಯಥಾ ನಕಲನ್ನು ಹಾಜರುಪಡಿಸಿದ್ದು, ನಿಆರ್. 5 ಮತ್ತು ನಿಆರ್. 6 ಎಂದು ಗುರುತಿಸಲಾಯಿತು. ಆದುದರಿಂದ ಅರ್ಜಿಯನ್ನು ವಜಾಗೊಳಿಸಬೇಕಾಗಿ ಪ್ರಾರ್ಥಿಸುತ್ತೇನೆ.

(ನಿಆರ್. 2 ಮತ್ತು 3 ರ ಮೂಲ ದಾಖಲೆಗಳನ್ನು ಪರಿಶೀಲಿಸಿ ಸಾಕ್ಷಿಗೆ ಹಿಂದಿರುಗಿಸಲಾಯಿತು)

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದಃ**

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೋಲೀಸ್ ದಾಖಲೆಗಳನ್ನು ಓದಿ ನೋಡಿ ತಿಳಿದುಕೊಂಡಿರುತ್ತೇನೆ. ಆರೋಪ ಪಟ್ಟಿ ಈ ಪ್ರಕರಣದಲ್ಲಿ ಯಾರ ಮೇಲಿ ಸಲ್ಲಿಸಿದ್ದಾರೆ ಎಂದು ತಿಳಿದುಕೊಂಡಿರುವುದಿಲ್ಲ. ಅಪಘಾತವನ್ನು ನಾನು ಕಣ್ಣಾರೆ ಕಂಡಿರುವುದಿಲ್ಲ. ದೋಷರೋಪಣಾ ಪಟ್ಟಿಯಲ್ಲಿ ಟ್ರಾಕ್ಟರ್ ಚಾಲಕ ಅತಿವೇಗವಾಗಿ ಚಾಲನೆ ಮಾಡಿ ಅಪಘಾತ ಪಡಿಸಿರುವುದಾಗಿ ನಮೂದಿಸಿರುತ್ತಾರೆ ಎಂದರೆ ಸರಿ. ದೋಷರೋಪಣಾ ಪಟ್ಟಿಯನ್ನು ಪ್ರಶ್ನಿಸಲು ಯಾವುದೇ ತೊಂದರೆ ಇರಲಿಲ್ಲ. ನಮ್ಮ ಚಾಲಕ ಕ್ರಿಮಿನಲ್ ನ್ಯಾಯಲಯದಲ್ಲಿ ತಪ್ಪೊಪ್ಪಿಕೊಂಡು ದಂಡ

ಪಾವತಿಸಿದ್ದಾನೆ ಎಂದರೆ ಸರಿ. ನಾವು ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(2 ನೇ ಎದುರುದಾರರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ)

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.